ಆಗಿದೆ ಎಂದು ಅನಿಸುತ್ತದೆ" ಎಂದಳು. "ಅದು ಹೇಗೆ?" "ನೀನು ಇಡೀ ಜೀವನ ಸ್ತ್ರೀ ಸುಖ ಕಾಣದೆ, ಬ್ರಹ್ಮಚಾರಿಯಂತೆ ಜೀವಿಸಬೇಕಾಗುತ್ತದೆ." "ಆದರೆ, ನಿನ್ನ ಮನ ನನ್ನೊಂದಿಗೆ ಇದೆಯಲ್ಲ, ನನಗೆ ಅಷ್ಟೇ ಸಾಕು." "ನನ್ನ ಮನವೇನೋ ನಿನ್ನ ಬಳಿಯೇ ಇದೆ. ಆದರೆ ಶರೀರ ಬೇರೆ ಕಡೆಗೆ ಇದೆ." ಈ ಕಲ್ಪನೆ ಮಾತ್ರದಿಂದ ಆತನಿಗೆ ವಿಚಿತ್ರ ಅನುಭೂತಿ ಉಂಟಾಯಿತು. ಅವನಲ್ಲಿದ್ದ ಕವಿ ಜಾಗೃತನಾದ. ತಮ್ಮಿಬ್ಬರ ಪ್ರೀತಿಯಲ್ಲಿ ಬೇರೆ ಏನೋ ಅಡಗಿದೆ ಅನಿಸಿ ರೋಮಾಂಚನಗೊಂಡ. "ನಾವು ಅರವತ್ತೈದು ವರ್ಷದವರಾದರೂ, ನಮ್ಮಿಬ್ಬರ ಪ್ರೇಮಕ್ಕೆ ಮಾತ್ರ ಎಂದೆಂದಿಗೂ ಚಿರ ಯೌವ್ವನವೇ." ಆತನ ಮಾತು ಕೇಳಿ ಆಕೆ, "ಶರೀರಕ್ಕೆ ಪ್ರಾಯವಾಗಬಹುದು. ಆದರೆ ನಮ್ಮ ಪ್ರೇಮಕ್ಕಲ್ಲ" ಎಂದಳು. ಅವರಿಬ್ಬರು ನಾಲ್ಕೈದು ದಿನ ಸಾಕಷ್ಟು ಹರಟೆ ಹೊಡೆದರು. ಇವರಿಬ್ಬರು ಸರಸ ಸಲ್ಲಾಪದಲ್ಲಿ ಮಗ್ನರಾಗಿದ್ದಾಗ ಮಗ್ಗಲು ಕೋಣೆಯೊಂದರಲ್ಲಿ ಮಂಚದ ಮೇಲೆ ಮಲಗಿಕೊಂಡ ನಿಶಿಕಾಂತನ ತಾಯಿ ಅಸಹನೀಯ ವೇದನೆಯಿಂದ ನರಳುತ್ತಿದ್ದಳು. ಆಕೆ ಜೀವನದಲ್ಲಿ ಸ್ವಾರಸ್ಯ ಕಳೆದುಕೊಂಡಿದ್ದಳು. ದಿನ ಕಳೆಯುವುದೇ ಆಕೆಗೆ ಸವಾಲಾಗಿತ್ತು. ಇನ್ನು ಮಗನ ಪ್ರೇಮ ಸಂಬಂಧದ ಕುರಿತು ಮಾತನಾಡಲು ಆಕೆಗೆ ಸ್ವಲ್ಪವೂ ಆಸಕ್ತಿ ಇರಲಿಲ್ಲ. ನಿಶಿಕಾಂತ ರೇವತಿಯ ಅತ್ತೆ ಮನೆಗೆ ನಡು ನಡುವೆ ಹೋಗುತ್ತಿದ್ದ. ಆ ಮನೆಯವರ ಜೊತೆಗೆ ಆತನ ಸೌಹಾರ್ದಯುತ ಸಂಬಂಧವಿತ್ತು. ರೇವತಿಯ ಗಂಡ ಕೆಲಸದ ನಿಮಿತ್ತ ಇಡೀ ದಿನ ಮನೆಯಲ್ಲಿ ಇರುತ್ತಿದ್ದಿಲ್ಲ. ಒಂದು ದಿನ ನಿಶಿಕಾಂತ ರೇವತಿಯ ಎರಡೂ ಕೈಗಳನ್ನು ಗಟ್ಟಿಯಾಗಿ ಹಿಡಿದು, ಆಕೆಯ ಕಣ್ಣಿನಲ್ಲಿ ಕಣ್ಣಿಟ್ಟು, "ನನ್ನ ಸಹನೆಯ ಕಟ್ಟೆ ಒಡೆದಿದೆ. ಇನ್ನು ನಾನು ಸಹಿಸಲಾರೆ" ಎಂದ. ಆಕೆಯೂ ಭಾವನಾವಶಳಾದಳು. ಆರ್ದ್ರವಾದ ಹೃದಯದಿಂದ, "ನಿನಗೆ ಏನು ಬೇಕು?" ಎಂದು ಕೇಳಿದಳು. "ನೀನು ಬೇಕು. ಕೇವಲ ನೀನು. ನಿನ್ನನ್ನು ಅಗಲಿ ನಾನು ಜೀವಿಸಲಾರೆ." "ಎಂದೆಂದಿಗೂ ನಾನು ನಿನ್ನವಳೇ." ಹೃದಯ ತುಂಬಿ ಬಂದ ಪ್ರಣಯದ ಮಾತುಗಳಿಂದ ಆಕೆಯ ಶರೀರ ಕಾವೇರಿತ್ತು. ನಿಶಿಕಾಂತ ಆಕೆಯನ್ನು ಬರಸೆಳೆದು ಬಲವಾಗಿ ಅಪ್ಪಿಕೊಂಡ. ಆಕೆಯ ತುಟಿಯ ಮೇಲೆ ಮುದ್ದಿನ ಸುರಿಮಳೆ ಸುರಿಸಿದ. ಕೆಲ ನಿಮಿಷದ ನಂತರ ಆತನ ಮೈಯಲ್ಲಿ ತಂಬಿದ ಪ್ರೇಮದ ನಶೆ ಸ್ವಲ್ಪ ಇಳಿಯಿತು. ನಿಶಿಕಾಂತ ಹುಚ್ಚನಂತೆ ಬಡಬಡಿಸಿದ, "ನನಗೆ ನಿನ್ನ ಶರೀರದೊಂದಿಗೆ ಏಕವಾಗಬೇಕಾಗಿದೆ. ನಿನ್ನ ಪ್ರತಿ ಜೀವಕಣಗಳಲ್ಲಿ ಒಂದಾಗುವ ಆಸೆ ಪ್ರಬಲವಾಗಿದೆ." ರೇವತಿ ಆತನಿಂದ ಸ್ವಲ್ಪ ದೂರ ಸರಿದಳು. ತುಟಿಯಂಚಲ್ಲೇ ನಕ್ಕಳು. "ಮದುವೆಗೂ ಮುಂಚೆ ನಾವಿಬ್ಬರು ಚುಂಬನದ ಸವಿಯನ್ನು ಸಾಕಷ್ಟು ಅನುಭವಿಸಿದ್ದೇವೆ. ಓ.ಕೆ... ನಾವು ಈ ಸೀಮೆಯವರೆಗೆ ತಲುಪಿದ್ದು ಸಾಕು. ಇನ್ನು ಮುಂದೆ ಸೀಮೋಲ್ಲಂಘನ ಮಾಡಬಾರದು ಎಂದು ನಿಶ್ಚಯ ಮಾಡಿದ್ದೇನೆ." ತನ್ನ ಈ ಅವಸರದ ಕೆಲಸದಿಂದ ರೇವತಿ ಕೋಪಗೊಂಡಿರಬಹುದೇ ಎಂದು ನಿಶಿಕಾಂತನಿಗೆ ಸಂಶಯ ಬಂದಿತ್ತು. ಆದರೆ ಹಾಗೇನೂ

**'ನಾನು ಏಳು ತಿಂಗಳ ಗರ್ಭಿಣಿ. ಮನೆಯಲ್ಲಿ ಕುಬುಸದ ಕಾರ್ಯಕ್ರಮವಿದೆ.' ಆತನಿಗೆ ಈ ವಿಷಯ ಈಗಾಗಲೇ ತಿಳಿದಿತ್ತು. ಆದರೆ ರೇವತಿಯ ಮುಖದಿಂದ ಕೇಳಿದಾಗ ಕಸಿವಿಸಿಗೊಂಡ. ಆತನ ಕವಿ ಹೃದಯಕ್ಕೆ ಭಾರೀ ಪೆಟ್ಟು ಬಿದ್ದಿತ್ತು.**